ಕರ್ನಾಟಕ ಉಚ್ಚ ನ್ಯಾಯಾಲಯ

(ಧಾರವಾಡ ಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎಂ.ಐ. ಅರುಣ್

ಶ್ರೀ ನಿಂಗಪ್ಪ ಮತ್ತು ಇತರರು -ವಿರುದ್ಧ ಶ್ರೀ ರಾಮಚಂದ್ರ

ಸಿ.ಆರ್.ಪಿ.ಸಂಖ್ಯೆ: 100028/2015, ದಿನಾಂಕ 18 ನೇ ಡಿಸೆಂಬರ್, 2020.

ಆಜ್ಞೆ

ನ್ಯಾಯಮೂರ್ತಿ ಶ್ರೀ ಎಂ.ಐ. ಅರುಣ್:

ಬೆಳಗಾವಿಯ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಎಂ.ಎ.ಸಂ .91/2013 ರಲ್ಲಿ ಐ.ಎ.ಸಂಖ್ಯೆ:4 ರಂದು ಹೊರಡಿಸಿದ ದಿನಾಂಕ 10.03.2015 ರ ಆದೇಶದಿಂದ ಬಾಧಿತರಾಗಿ, ಅದರಲ್ಲಿನ ಎದುರುದಾರರು ಈ ಪುನರೀಕ್ಷಣಾ ಅರ್ಜಿಯನ್ನು ಸಲ್ಲಿಸಿದ್ದಾರೆ.

2. ಪಕ್ಷಕಾರರ ಪರ ಮಾನ್ಯ ವಕೀಲರುಗಳ ವಾದಗಳನ್ನು ಆಲಿಸಲಾಗಿದೆ.

3.ದಿನಾಂಕ: 15.02.1980 ರ ವಿಲ್ಗೆ ಸಂಬಂಧಿಸಿದಂತೆ ಪ್ರೊಬೇಟ್ ನೀಡುವುದಕ್ಕಾಗಿ, ಬೆಳಗಾವಿಯ I ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ (ಕಿರಿಯ ವಿಭಾಗ) ನ್ಯಾಯಾಲಯದಲ್ಲಿ ' ಭಾರತ ಉತ್ತರಾಧಿಕಾರ ಅಧಿನಿಯಮ'ದ (ಇನ್ನು ಮುಂದೆ ' ಉತ್ತರಾಧಿಕಾರ ಅಧಿನಿಯಮ ' ಎಂದು ಕರೆಯಲಾಗಿದೆ) 276 ನೇ ಪ್ರಕರಣದ ಅಡಿಯಲ್ಲಿ ಇದರಲ್ಲಿನ ಅರ್ಜಿದಾರರು ಪಿ ಮತ್ತು ಎಸ್ಸಿಸಂಖ್ಯೆ: 25/2008 ನ್ನು ಸಲ್ಲಿಸಿದ್ದರು.ಅದನ್ನು ವಿರೋಧಿಸಿಲ್ಲದ್ದರಿಂದಾಗಿ,ದಿನಾಂಕ: 25.10.2008 ರ ಆದೇಶದ ಮೂಲಕ ಅದನ್ನು ಪುರಸ್ಕರಿಸಲಾಯಿತು ಮತ್ತು ಇದರಲ್ಲಿನ ಅರ್ಜಿದಾರರ ಪರವಾಗಿ ಪ್ರೊಬೇಟನ್ನು ನೀಡಬೇಕೆಂದು ನಿರ್ದೇಶಿಸಲಾಯಿತು.ಪಿ ಮತ್ತು ಎಸ್ಸಿಸಂಖ್ಯೆ: 25/2008 ರಲ್ಲಿ ಪಕ್ಷಕಾರರಾಗಿಲ್ಲದ ಇದರಲ್ಲಿನ ಎದುರುದಾರರು ಇದರಿಂದ ಬಾಧಿತರಾಗಿದ್ದು, ಬೆಳಗಾವಿಯ II ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದಲ್ಲಿ, ' ಸಿಪಿಸಿ ' ಯ XLIII ನೇ ಕ್ರಮಾದೇಶದ 1 ನೇ ನಿಯಮದ ಅಡಿಯಲ್ಲಿ ಎಂ.ಎ.ಸಂ. 20/2009 ನ್ನು ಸಲ್ಲಿಸಿದ್ದರು.ಈ ಅಪೀಲನ್ನು ಸಲ್ಲಿಸುವಲ್ಲಿ 142 ದಿನಗಳ ವಿಳಂಬವಾಗಿದ್ದರಿಂದ, ವಿಳಂಬವನ್ನು ಮನ್ನಾ ಮಾಡಲು ಕೋರಿ, ಅರ್ಜಿ ಸಲ್ಲಿಸಲಾಯಿತು.ವಿಳಂಬವನ್ನು ಮನ್ನಾ ಮಾಡಲು ಕೋರಿರುವ ಅರ್ಜಿಗೆ ಆಕ್ಷೇಪಣಾ ಹೇಳಿಕೆಯನ್ನು ಸಲ್ಲಿಸಿದ್ದರಿಂದ, ಸದರಿ ಅರ್ಜಿಯನ್ನು ಪರಿಗಣಿಸುವಾಗ, ಬೆಳಗಾವಿಯ ಮಾನ್ಯ ಹಿರಿಯ ಸಿವಿಲ್ ನ್ಯಾಯಾಧೀಶರು ಅಪೀಲನ್ನು ಸಮರ್ಥಿಸುವುದಕ್ಕೆ ಸಂಬಂಧಿಸಿದಂತೆ ಮಂಡಿಸಿದ ವಾದಗಳನ್ನು ಗಮನಿಸಿ, ಈ ಅಪೀಲು ಸ್ವತಃ ಸಮರ್ಥನೀಯವಾಗಿಲ್ಲ ಎಂದು ಅಭಿಪ್ರಾಯಪಟ್ಟರು.ಆದಾಗ್ಯೂ, ವಿಳಂಬವನ್ನು ಮನ್ನಾ ಮಾಡಲು ಕೋರಿ ಸಲ್ಲಿಸಿದ ಅರ್ಜಿಯನ್ನು ಅಪೀಲು ನ್ಯಾಯಾಲಯವು ನಿರ್ಧರಿಸಲಿಲ್ಲ ಮತ್ತು ಈ ಅಪೀಲು ಸಮರ್ಥನೀಯವಾಗಿಲ್ಲವೆಂದು ಅದನ್ನು ವಜಾ ಮಾಡಲಾಯಿತು.ಸದರಿ ಆದೇಶವನ್ನು ಪ್ರಶ್ನಿಸಿ, ಇದರಲ್ಲಿನ ಎದುರುದಾರರು ಈ ನ್ಯಾಯಾಲಯದ ಮುಂದೆ ರಿಟ್ ಅರ್ಜಿಸಂಖ್ಯೆ: 63619/2010 ನ್ನು ಸಲ್ಲಿಸಿದರು.

4. ವಿಚಾರಣೆಯ ಸಮಯದಲ್ಲಿ, ಅರ್ಜಿದಾರರ ಪರ ಮಾನ್ಯ ವಕೀಲರು, ಅಪೀಲು ಸಮರ್ಥನೀಯವಾಗಿರಲಿಲ್ಲ ಎಂದು ಅಭಿಪ್ರಾಯಪಡುವಲ್ಲಿ ಮೊದಲನೇ ಅಪೀಲು ನ್ಯಾಯಾಲಯವು ತಪ್ಪೆಸಗಿದೆ ಎಂದು ಮತ್ತು ಬಿ.ಆರ್. ಜಯಂತಿ ಮತ್ತು ಇತರರು -ವಿರುದ್ಧ-ರಾಧಮ್ಮ ಮತ್ತು ಇತರರು 1 ' ಮೊಕದ್ದಮೆಯಲ್ಲಿ ಹಾಗೂ ಮಿಸ್ ಪ್ರೆಸ್ಸಿ ಪಿಂಟೊ ವಿರುದ್ಧ-ಮಿಸ್ಟರ್ ರೋನಿ ಮ್ಯಾಕ್ಸಿಮ್ ಪಿಂಟೊ ಮತ್ತು ಇತರರು 2 [2] ಮೊಕದ್ದಮೆಯಲ್ಲಿ ನಿಗದಿಪಡಿಸಿದ ಅನುಪಾತವನ್ನು ಪಾಲಿಸುವಲ್ಲಿ ಅಧಿವಿಚಾರಣಾ ನ್ಯಾಯಾಲಯವು ವಿಫಲವಾಗಿದೆ ಎಂದು ಸದರಿ ರಿಟ್ ಅರ್ಜಿಯಲ್ಲಿ ನಿವೇದಿಸಿದ್ದಾರೆ.ಇದಕ್ಕೆ ವಿರುದ್ಧವಾಗಿ, ಸದರಿ ರಿಟ್ ಅರ್ಜಿಯಲ್ಲಿ ಎದುರುದಾರರ ಪರ ಹಾಜರಾದ ಮಾನ್ಯ ವಕೀಲರು ಸುಬಲ್ ಪೌಲ್ ವಿರುದ್ಧ ಮಲಿನೊ ಪೌಲ್ 3 ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯವು ನಿಗದಿಪಡಿಸಿದ ಅನುಪಾತದ ಚ ದೃಷ್ಟಿಯಿಂದ, ಮೊದಲನೇ ಅಪೀಲು ನ್ಯಾಯಾಲಯದ ಪ್ರಶ್ನಿತ ಆದೇಶಕ್ಕೆ ಹಸ್ತಕ್ಷೇಪದ ಅಗತ್ಯವಿಲ್ಲ ಎಂದು ವಾದಿಸಿದರು.ಈ ಮೇಲಿನ ವಾದಗಳ ಹಿನ್ನೆಲೆಯಲ್ಲಿ ಮಾನ್ಯ ಏಕ ಸದಸ್ಯ ನ್ಯಾಯಾಧೀಶರು ಮೇಲೆ ಹೇಳಿದ ಮಿಸ್ ಪ್ರೆಸ್ಸಿ ಪಿಂಟೊ ( ಈ ನ್ಯಾಯಾಲಯದ ವಿಭಾಗೀಯ ಪೀಠವು ನೀಡಿದ) ಮತ್ತು ಮತ್ತು ಮೇಲೆ ಹೇಳಿದ ಸುಬಲ್ ಪೌಲ್ (ಸರ್ವೋಚ್ಚ ನ್ಯಾಯಾಲಯವು ನೀಡಿದ) ಮೊಕದ್ದಮೆಗಳಲ್ಲಿ ಚ ವರದಿಯಾದ ತೀರ್ಮಾನಗಳನ್ನು ಉಲ್ಲೇಖಿಸುತ್ತಾ, ಮೇಲೆ ಹೇಳಿದ ಸುಬಲ್ ಪೌಲ್ ಮೊಕದ್ದಮೆಯಲ್ಲಿ, ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು, ಚ ಮೇಲೆ ಹೇಳಿದ ಮಿಸ್ ಪ್ರೆಸ್ಸಿ ಪಿಂಟೊ ಮೊಕದ್ದಮೆಯಲ್ಲಿ ಈ ನ್ಯಾಯಾಲಯದ ವಿಭಾಗೀಯ ಪೀಠದ ಗಮನಕ್ಕೆ ತರಲಾಗಿಲ್ಲ ಎಂದು ಅಭಿಪ್ರಾಯಪಡುತ್ತಾ, ಯಾವ ತೀರ್ಮಾನಗಳನ್ನು ಅನುಸರಿಸಬೇಕು ಎಂಬ ಬಗ್ಗೆ ಅನುಮಾನವನ್ನು ವ್ಯಕ್ತಪಡಿಸಿದ್ದಾರೆ.ಹೀಗಾಗಿ, ಸನ್ಮಾನ್ಯ ನ್ಯಾಯಾಧೀಶರು ವಿಸ್ತೃತ ನ್ಯಾಯಪೀಠದ ಪರಿಗಣನೆಗಾಗಿ ಪ್ರಶ್ನೆಯನ್ನು ರೂಪಿಸಿದರು.ಪ್ರಶ್ನೆಯನ್ನು ಈ ಕೆಳಗಿನಂತೆ ಓದಲಾಗಿದೆ:

" ಮಿಸ್ ಪ್ರೆಸ್ಸಿ ಪಿಂಟೊ -ವಿರುದ್ಧ-ರೋನಿ ಮ್ಯಾಕ್ಸಿಮ್ ಪಿಂಟೊ ಮತ್ತು ಇತರರು 2010 ( 1) ಕೆಸಿಸಿಆರ್ 536 (ಡಿಬಿ) ರಲ್ಲಿ ನಿಗದಿಪಡಿಸಿದ ಕಾನೂನಿಗೆ, ಸುಬಲ್ ಪೌಲ್ ವಿರುದ್ಧ ಮಲಿನೊ ಪೌಲ್ ಮತ್ತು ಇನ್ನೊಬ್ಬರು ಎಐಆರ್ 2003 ಎಸ್ಸಿ 1928 ಮೊಕದ್ದಮೆಯಲ್ಲಿ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯವು ನೀಡಿದ ತೀರ್ಪಿನ ಹಿನ್ನೆಲೆಯಲ್ಲಿ ಮರುಪರಿಶೀಲನೆ ಅಗತ್ಯವಿದೆಯೆ? ಮಾನ್ಯ ಏಕ ನ್ಯಾಯಾಧೀಶರುದಿನಾಂಕ: 16.04.2012 ರ ಆದೇಶದ ಮೂಲಕ ಈ ಪ್ರಶ್ನೆಯನ್ನು ಪರಿಗಣಿಸಲು ಮತ್ತು ನಿರ್ಧರಿಸಲು ಸೂಕ್ತವಾದ ನ್ಯಾಯಪೀಠದ ರಚನೆಗಾಗಿ ಸನ್ಮಾನ್ಯ ಮುಖ್ಯ ನ್ಯಾಯಮೂರ್ತಿಯವರ ಮುಂದೆ ಈ ವಿಷಯವನ್ನು ಮಂಡಿಸಿದರು.ಪೂರ್ಣ ನ್ಯಾಯಪೀಠವನ್ನು ರಚಿಸಲಾಗಿದ್ದು, ' ಮಿಸ್ ಪ್ರೆಸ್ಸಿ ಪಿಂಟೊ ವಿರುದ್ಧ-ರೋನಿ ಮ್ಯಾಕ್ಸಿಮ್ ಪಿಂಟೊ ಮತ್ತು ಇತರರು (ಮೇಲಿನ) ಮೊಕದ್ದಮೆಯಲ್ಲಿ ವಿಭಾಗೀಯ ಪೀಠದ ತೀರ್ಮಾನವನ್ನು ಮರುಪರಿಶೀಲಿಸುವ ಅಗತ್ಯವಿಲ್ಲ ಎಂದು ಅಭಿಪ್ರಾಯಪಡುವ ಮೂಲಕ ಈ ಪ್ರಶ್ನೆಗೆ ಉತ್ತರಿಸಲಾಗಿದೆ.ಶ್ರೀ ರಾಮಚಂದ್ರ ವಿರುದ್ಧ ನಿಂಗಪ್ಪ ದತ್ತಾತ್ರೇಯ ಕೋಲ್ಕರ್ ಮತ್ತು ಇತರರು ಮೊಕದ್ದಮೆಯಲ್ಲಿ ಪೂರ್ಣ ನ್ಯಾಯಪೀಠದ ಅಭಿಪ್ರಾಯವನ್ನು ವರದಿ ಮಾಡಲಾಗಿದೆ.ಆದ್ದರಿಂದ, ರಿಟ್ ಅರ್ಜಿಯಲ್ಲಿ ಅರ್ಜಿದಾರರಾಗಿದ್ದ, ಇದರಲ್ಲಿನ ಎದುರುದಾರರು ರಿಟ್ ಅರ್ಜಿಯನ್ನು ಹಿಂಪಡೆಯಲು ಮತ್ತು ಅಪೀಲು ಸಲ್ಲಿಸಲು ಅನುಮತಿಯನ್ನು ಕೋರಿದರು.ಮಾನ್ಯ ವಕೀಲರ ನಿವೇದನೆಯನ್ನು ದಾಖಲಿಸಲಾಯಿತು ಮತ್ತು ಪಕ್ಷಕಾರರ ಎಲ್ಲಾ ವಾದಗಳಿಗೆ ಅವಕಾಶ ನೀಡಿ, ಅದಕ್ಕನುಗುಣವಾಗಿ ಅರ್ಜಿಯನ್ನು ವಿಲೆ ಮಾಡಲಾಯಿತು.ಅದಲ್ಲದೆ, ನಾಲ್ಕು ವಾರಗಳ ಅವಧಿಯೊಳಗೆ ಅಪೀಲನ್ನು ಸಲ್ಲಿಸಬೇಕಿದ್ದಲ್ಲಿ, ರಿಟ್ ಅರ್ಜಿಯನ್ನು ವಿಚಾರಣೆ ಮಾಡುವಲ್ಲಿ ಆದ ಸಮಯವನ್ನು ಸಹ ಬಿಟ್ಟುಬಿಡಲಾಯಿತು.

5. ಆ ತರುವಾಯ ಇದರಲ್ಲಿನ ಎದುರುದಾರರು ಬೆಳಗಾವಿಯ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರ ಮುಂದೆ ಎಂ.ಎ.ಸಂ .91/2013 ನ್ನು ಮಂಡಿಸಿದರು.ಇದರಲ್ಲಿನ 1 ನೇ ಮತ್ತು 2 ನೇ ಅರ್ಜಿದಾರರು ಎಂ.ಎ.ಸಂಖ್ಯೆ:91/2013 ನ್ನು ಅದು ಸಮರ್ಥನೀಯವಾಗಿಲ್ಲದ ಕಾರಣ ಅದನ್ನು ವಜಾಗೊಳಿಸಲು ಕೋರಿ ' ಸಿಪಿಸಿ'ಯ 151 ನೇ ಪ್ರಕರಣದ ಅಡಿಯಲ್ಲಿ ಐ.ಎ.ಸಂಖ್ಯೆ:4 ಅರ್ಜಿಯನ್ನು ಸಲ್ಲಿಸಿದರು.ಮೊದಲನೇ ಅಪೀಲು ನ್ಯಾಯಾಲಯವು ಎರಡೂ ಪಕ್ಷಕಾರರ ವಾದಗಳನ್ನು ಆಲಿಸಿದ ನಂತರ, ಸದರಿ ಅರ್ಜಿಯನ್ನು ವಜಾಗೊಳಿಸಿತು.ಇದರಿಂದ ಬಾಧಿತರಾಗಿ ಎಂ.ಎ.ಸಂಖ್ಯೆ:91/2013 ರಲ್ಲಿ ಎದುರುದಾರರು ಈ ಸಿವಿಲ್ ಪುನರೀಕ್ಷಣಾ ಅರ್ಜಿಯನ್ನು ಸಲ್ಲಿಸಿದರು.

6. " ಮಿಸ್ ಪ್ರೆಸ್ಸಿ ಪಿಂಟೊ ವಿರುದ್ಧ ರೋನಿ ಮ್ಯಾಕ್ಸಿಮ್ ಪಿಂಟೊ ಮತ್ತು ಇತರರು (ಮೇಲಿನ) ಮೊಕದ್ದಮೆಯಲ್ಲಿ ಈ ನ್ಯಾಯಾಲಯವು ವಿಧಿಸಿದ ಕಾನೂನಿನ ಹಿನ್ನೆಲೆಯಲ್ಲಿ, ಶ್ರೀ ರಾಮಚಂದ್ರು ವಿರುದ್ಧ ನಿಂಗಪ್ಪ ದತ್ತಾತ್ರೇಯ ಕೋಲ್ಕರ್ ಮತ್ತು ಇತರರು (ಮೇಲಿನ) ಮೊಕದ್ದಮೆಯಲ್ಲಿ ಈ ನ್ಯಾಯಾಲಯದ ಪೂರ್ಣ ನ್ಯಾಯಪೀಠದ ತೀರ್ಮಾನ ಮತ್ತು ಬಿ.ಆರ್. ಜಯಂತಿ ಮತ್ತು ಇತರರು -ವಿರುದ್ಧ-ರಾಧಮ್ಮ ಮತ್ತು ಇತರರು (ಮೇಲಿನ) ಮೊಕದ್ದಮೆಯಲ್ಲಿ ಈ ನ್ಯಾಯಾಲಯದ ತೀರ್ಮಾನ ಮತ್ತು ಉತ್ತರಾಧಿಕಾರ ಅಧಿನಿಯಮದ 299 ನೇ ಪ್ರಕರಣದ ಓದಿನ ಹಿನ್ನೆಲೆಯಲ್ಲಿ, ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರಿಗೆ ಸಲ್ಲಿಸಿದ ಅಪೀಲು ಸಮರ್ಥನೀಯವಾಗಿಲ್ಲ ಎಂಬುದು ಅರ್ಜಿದಾರರ ಪರ ಮಾನ್ಯ ವಕೀಲರ ವಾದವಾಗಿದೆ.ಮುಂದುವರೆಸುತ್ತಾ, ಹಾಗಿಲ್ಲದಿದ್ದರೂ ಎಂ.ಎ.ಸಂಖ್ಯೆ:20/2009 ರಲ್ಲಿ ಬೆಳಗಾವಿಯ ಸಿವಿಲ್ ನ್ಯಾಯಾಧೀಶರ (ಹಿರಿಯ ವಿಭಾಗ) ಆದೇಶವು ಅಂತಿಮತೆಯನ್ನು ಪಡೆದಿದೆ ಮತ್ತು ತತ್ಪರಿಣಾಮವಾಗಿ, ಇದರಲ್ಲಿನ ಅರ್ಜಿದಾರರು ಸಲ್ಲಿಸಿದ ಅರ್ಜಿಯನ್ನು ಪುರಸ್ಕರಿಸುವ ಮೂಲಕ ಎಂ.ಎ.ಸಂಖ್ಯೆ: 91/2013 ನ್ನು ವಜಾಗೊಳಿಸಬೇಕಿದೆ ಎಂದು ವಾದಿಸಿದರು.

7. ಬೆಳಗಾವಿಯ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಹೊರಡಿಸಿದ ಆದೇಶವನ್ನು ಎದುರುದಾರರ ಪರ ಮಾನ್ಯ ವಕೀಲರು ಸಮರ್ಥಿಸಿರುತ್ತಾರೆ.ಈ ರಿಟ್ ಅರ್ಜಿಯಲ್ಲಿ ಅಪೀಲು ಸಲ್ಲಿಸಲು ಇದರಲ್ಲಿನ ಎದುರುದಾರರಿಗೆ ಸ್ವಾತಂತ್ರ್ಯ ನೀಡಲಾಯಿತು ಮತ್ತು ಕರ್ನಾಟಕ ಸಿವಿಲ್ ನ್ಯಾಯಾಲಯಗಳ ಅಧಿನಿಯಮ, 1964 ರ 23- ಎ ಪ್ರಕರಣದ ಉಪಬಂಧಗಳ ಅನುಸಾರ, ಅಪೀಲನ್ನು ಬೆಳಗಾವಿಯ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರ ಮುಂದೆ ಸಲ್ಲಿಸಿರಬೇಕಾಗಿತ್ತು ಎಂದು ಅವರು ವಾದಿಸಿದ್ದಾರೆ.

8. ಈ ಪುನರೀಕ್ಷಣಾ ಅರ್ಜಿಯಲ್ಲಿ ಪರಿಗಣನೆಗೆ ಬರುವ ಸಂಕ್ಷಿಪ್ತ ಪ್ರಶ್ನೆಯೆಂದರೆ, ಸಿವಿಲ್ ನ್ಯಾಯಾಧೀಶರು (ಕಿರಿಯ ವಿಭಾಗ) ಹೊರಡಿಸಿದ ಪ್ರೊಬೇಟ್ನ ಆದೇಶದ ಮೇರೆಗೆ ಅಪೀಲು ಎಲ್ಲಿ ಇದೆ?ಎಂಬುದಾಗಿದೆ.

9. ಉತ್ತರಾಧಿಕಾರ ಅಧಿನಿಯಮದ 276 ನೇ ಪ್ರಕರಣವು ಪ್ರೊಬೇಟ್ಗಾಗಿ ಅರ್ಜಿ ಸಲ್ಲಿಸುವ ಬಗ್ಗೆ ವಿವರಿಸುತ್ತದೆ ಅದನ್ನು ಈ ಕೆಳಗಿನಂತೆ ಓದಲಾಗಿದೆ:೧

"276. ಪ್ರೊಬೇಟಿಗಾಗಿ ಅರ್ಜಿ:- ( 1) ಉಯಿಲನ್ನು ಲಗತ್ತಿಸಿ, ಪ್ರೊಬೇಟಿಗಾಗಿ ಅಥವಾ ಆಡಳಿತ ಪತ್ರಕ್ಕಾಗಿ ಸಲ್ಲಿಸುವ ಅರ್ಜಿಯನ್ನು ಇಂಗ್ಲೀಷಿನಲ್ಲಾಗಲೀ ಅಥವಾ ಯಾವ ನ್ಯಾಯಾಲಯದ ಮುಂದೆ ಉಯಿಲಿನೊ ೦ ದಿಗೆ ಅರ್ಜಿಯನ್ನು ಸಲ್ಲಿಸಲಾಗುವುದೋ ಆ ನ್ಯಾಯಾಲಯದ ವ್ಯವಹರಣೆಗಳಲ್ಲಿ ಸಾಮಾನ್ಯವಾಗಿ ಬಳಕೆಯಲ್ಲಿರುವ ಭಾಷೆಯಲ್ಲಾಗಲೀ ಸುಸ್ಪಷ್ಟವಾಗಿ ಬರೆದ ಮನವಿ ಪತ್ರದ ಮೂಲಕ ಅಥವಾ 237, 238 ಮತ್ತು 239 ನೇ

ಪ್ರಕರಣಗಳಲ್ಲಿ ನಮೂದಿಸಿದ ಸಂದರ್ಭಗಳಲ್ಲಿ ಅದರ ಒಳಾಂಶಗಳ ಪ್ರತಿ, ಕರಡು ಅಥವಾ ಹೇಳಿಕೆಯನ್ನು ಲಗತ್ತಿಸಿ ಮತ್ತು

( ಎ) ಮರಣಶಾಸನ ಕರ್ತನ ಮರಣದ ಕಾಲವನ್ನು

(ಬಿ) ಲಗತ್ತಿಸಿದ ಬರಹವು ಅವನ ಅಂತಿಮ ಉಯಿಲು ಮತ್ತು ಮೃತ್ಯು ಪತ್ರವೆಂದು;

(ಸಿ) ಅದನ್ನು ಕ್ರಮಬದ್ಧವಾಗಿ ಬರೆದುಕೊಡಲಾಗಿತ್ತೆಂದು;

(ಡಿ) ಅರ್ಜಿದಾರರ ಕೈಗೆ ಬರುವ ಸಂಭವವಿರುವಂಥ ಆಸ್ತಿಗಳ ಮೊಬಲಗನ್ನು;

(ಇ) ಅರ್ಜಿಯನ್ನು ಪ್ರೊಬೇಟೆಗಾಗಿ ಮಾಡಿಕೊಂಡಾಗ, ಅರ್ಜಿದಾರನು ಉಯಿಲಿನಲ್ಲಿ ಹೆಸರಿಸಿದ ನಿರ್ವಾಹಕನೆಂದು ನಿರೂಪಿಸಿ ಸಲ್ಲಿಸತಕ್ಕದ್ದು.

( 2) ಈ ವಿವರಗಳ ಜೊತೆಗೆ, ಅರ್ಜಿಯು

(ಎ) ಅರ್ಜಿಯನ್ನು ಜಿಲ್ಲಾ ನ್ಯಾಯಾಧೀಶನಿಗೆ ಹಾಕಿಕೊಂಡಾಗ, ಮೃತನು ಅವನ ಮರಣದ ಕಾಲದಲ್ಲಿ ನಿಗದಿಯಾದ ವಾಸಸ್ಥಳವನ್ನು ಹೊಂದಿದ್ದನೆಂದು ಅಥವಾ ಆ ನ್ಯಾಯಾಧೀಶನ ಅಧಿಕಾರ ವ್ಯಾಪ್ತಿಯೊಳಗೆ ಅವನಿಗೆ ಸ್ವತ್ತು ಇದ್ದಿತ್ತೆಂದು, ಮತ್ತು

(ಬಿ) ಅರ್ಜಿಯನ್ನು ಜಿಲ್ಲಾ ಪ್ರತಿನಿಧಿಗೆ ಮಾಡಿಕೊಂಡಾಗ, ಮೃತನು ಅವನ ಮರಣದ ಕಾಲದಲ್ಲಿ ಅಂಥ ಪ್ರತಿನಿಧಿಯ ಅಧಿಕಾರ ವ್ಯಾಪ್ತಿಯೊಳಗೆ ನಿಗದಿತ ವಾಸಸ್ಥಳವನ್ನು ಹೊಂದಿದ್ದನೆಂದು ಸಹ ನಿರೂಪಿಸತಕ್ಕದ್ದು.

( 3) ಅರ್ಜಿಯನ್ನು ಜಿಲ್ಲಾ ನ್ಯಾಯಾಧೀಶನಿಗೆ ಮಾಡಿಕೊಂಡಿರುವಲ್ಲಿ ಮತ್ತು ಅರ್ಜಿದಾರನ ಕೈಗೆ ಬರುವ ಸಂಭವವಿರುವ ಆಸ್ತಿಗಳ ಯಾವುದೇ ಭಾಗವು ಇನ್ನೊಂದು ರಾಜ್ಯದಲ್ಲಿ ಇರುವಲ್ಲಿ ಅರ್ಜಿದಾರನು ಅಂಥ ಪ್ರತಿಯೊಂದು ರಾಜ್ಯದಲ್ಲಿ ಇರುವ ಅಂಥ ಆಸ್ತಿಗಳ ಮೊಬಲಗನ್ನು ಮತ್ತು ಯಾವ ಜಿಲ್ಲಾ ನ್ಯಾಯಾಧೀಶರ ಅಧಿಕಾರ ವ್ಯಾಪ್ತಿಯೊಳಗೆ ಅಂಥ ಆಸ್ತಿಗಳು ಇರುತ್ತವೆಯೋ ಆ ಜಿಲ್ಲಾ ನ್ಯಾಯಾಧೀಶರನ್ನು ಸಹ ನಮೂದಿಸತಕ್ಕದ್ದು. "

10. ಉತ್ತರಾಧಿಕಾರ ಅಧಿನಿಯಮದ 384 ನೇ ಮತ್ತು 388 ನೇ ಪ್ರಕರಣಗಳನ್ನು ಈ ಕೆಳಗಿನಂತೆ ಓದಲಾಗಿದೆ:

“384. ಅಪೀಲು:- ( 1) ಈ ಭಾಗದ ಇತರ ಉಪಬಂಧಗಳಿಗೆ ಒಳಪಟ್ಟು, ಈ ಭಾಗದ ಮೇರೆಗೆ ಪ್ರಮಾಣಪತ್ರವನ್ನು ನೀಡುವ, ನಿರಾಕರಿಸುವ ಅಥವಾ ರದ್ದುಗೊಳಿಸುವ ಜಿಲ್ಲಾ ನ್ಯಾಯಾಧೀಶನ ಆದೇಶದ ಮೇಲೆ ಉಚ್ಚ ನ್ಯಾಯಾಲಯಕ್ಕೆ ಅಪೀಲಿಗೆ ಚ ಅವಕಾಶವಿರತಕ್ಕದ್ದು ಮತ್ತು ಉಚ್ಚ ನ್ಯಾಯಾಲಯವು ತಾನು ಚ ಯುಕ್ತವೆಂದು ಯೋಚಿಸಿದರೆ, ಅಪೀಲಿನ ಮೇಲಿನ ತನ್ನ ಆದೇಶದ ಮೂಲಕ ಯಾವ ವ್ಯಕ್ತಿಗೆ ಪ್ರಮಾಣಪತ್ರವನ್ನು ನೀಡತಕ್ಕದ್ದೋ ಆ ವ್ಯಕ್ತಿಯನ್ನು ಘೋಷಿಸತಕ್ಕದ್ದು ಮತ್ತು ಪ್ರಮಾಣ ಪತ್ರಕ್ಕಾಗಿ ಅರ್ಜಿಯನ್ನು ಸಲ್ಲಿಸಿದ ಮೇಲೆ, ಈಗಾಗಲೇ ಮಂಜೂರು ಮಾಡಿರುವ ಪ್ರಮಾಣಪತ್ರ ಯಾವುದಾದರೂ ಇದ್ದರೆ ಅದನ್ನು ರದ್ದುಗೊಳಿಸಿ, ತದನುಸಾರವಾಗಿ ಪ್ರಮಾಣಪತ್ರವನ್ನು ನೀಡುವಂತೆ ಜಿಲ್ಲಾ ನ್ಯಾಯಾಧೀಶನಿಗೆ ನಿರ್ದೇಶಿಸಬಹುದು.

( 2) ( 1) ನೇ ಉಪ-ಪ್ರಕರಣದ ಮೇರೆಗಿನ ಅಪೀಲನ್ನು ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908 ರ 5) ರ ಮೇರೆಗೆ ಅಪೀಲಿಗಾಗಿ ಅವಕಾಶ ಕೊಟ್ಟಿರುವ ಕಾಲದೊಳಗೆ ಸಲ್ಲಿಸತಕ್ಕದ್ದು.

( 3) ( 1) ನೇ ಉಪ-ಪ್ರಕರಣದ ಉಪಬಂಧಗಳಿಗೆ ಮತ್ತು ಸಿವಿಲ್ ಪ್ರಕ್ರಿಯಾ ಸಂಹಿತೆ, 1908 ರ (1908 ರ 5) 141 ನೇ ಪ್ರಕರಣದ ಮೂಲಕ ಅನ್ವಯಿಸಲಾದಂತೆ ಉಚ್ಚ ನ್ಯಾಯಾಲಯದ ಅಭಿಪ್ರಾಯ ಕೋರಿಕೆಗೆ ಮತ್ತು ಪುನರೀಕ್ಷಣೆಗೆ ಮತ್ತು ಸೂಕ್ತ ತೀರ್ಪಿನ ಪುನರಾವಲೋಕನಕ್ಕೂ ಸಂಬಂಧಿಸಿದ ಉಪಬಂಧಗಳಿಗೆ ಒಳಪಟ್ಟು ಈ ಭಾಗದ ಮೇರೆಗಿನ ಜಿಲ್ಲಾ ನ್ಯಾಯಾಧೀಶನ ಆದೇಶವು ಅಂತಿಮವಾಗಿರತಕ್ಕದ್ದು.

388. ಈ ಅಧಿನಿಯಮದ ಉದ್ದೇಶಗಳಿಗಾಗಿ ಅಧಿವಿಚಾರಣಾ ನ್ಯಾಯಾಲಯಗಳಲ್ಲಿ ಜಿಲ್ಲಾ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯನ್ನು ನಿಹಿತಗೊಳಿಸುವುದು:- ( 1) ರಾಜ್ಯ ಸರ್ಕಾರವು ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಜಿಲ್ಲಾ ನ್ಯಾಯಾಧೀಶನ ನ್ಯಾಯಾಲಯದ ದರ್ಜೆಗಿಂತ ಕೆಳಗಿನ ದರ್ಜೆಯ ಯಾವುದೇ ನ್ಯಾಯಾಲಯದಲ್ಲಿ ಈ ಭಾಗದ ಮೇರೆಗಿನ ಜಿಲ್ಲಾ ನ್ಯಾಯಾಧೀಶನ ನ್ಯಾಯಾಲಯದ ದರ್ಜೆಗಿಂತ ಕೆಳಗಿನ ದರ್ಜೆಯ ಯಾವುದೇ ನ್ಯಾಯಾಲಯದಲ್ಲಿ ಈ ಭಾಗದ ಮೇರೆಗಿನ ಜಿಲ್ಲಾ ನ್ಯಾಯಾಧೀಶನ ಪ್ರಕಾರ್ಯಗಳನ್ನು ಚಲಾಯಿಸುವ ಚಲಾಯಿಸುವ ಅಧಿಕಾರವನ್ನು ನಿಹಿತಗೊಳಿಸಬಹುದು.

(2) ಹಾಗೆ ನಿಹಿತಗೊಳಿಸಲಾದ ಯಾವುದೇ ಅಧಿವಿಚಾರಣಾ ನ್ಯಾಯಾಲಯವು ಅದರ ಅಧಿಕಾರ ವ್ಯಾಪ್ತಿಯ ಸ್ಥಳೀಯ ಪರಿಮಿತಿಯೊಳಗೆ, ಜಿಲ್ಲಾ ನ್ಯಾಯಾಧೀಶನಿಗೆ ಈ ಭಾಗದ ಮೂಲಕ ಪ್ರದಾನ ಮಾಡಿದ ಎಲ್ಲಾ ಅಧಿಕಾರಗಳನ್ನು ಚಲಾಯಿಸುವಲ್ಲಿ, ಜಿಲ್ಲಾ ನ್ಯಾಯಾಧೀಶನೊಂದಿಗೆ ಸಮವರ್ತಿ ಅಧಿಕಾರ ವ್ಯಾಪ್ತಿಯನ್ನು ಹೊಂದಿರತಕ್ಕದ್ದು ಮತ್ತು ಜಿಲ್ಲಾ ನ್ಯಾಯಾಧೀಶನಿಗೆ ಸಂಬಂಧಪಟ್ಟ ಈ ಭಾಗದ ಉಪಬ ಂ ಧಗಳು ಅ ಂ ಥ ಅಧಿ ವಿಚಾರಣಾ ನ್ಯಾ ಂ ತಾ ಲ ಂ ಕ್ಕೂ ಅದು ಅದು ಜಿಲ್ಲಾ ಜಿಲ್ಲಾ ನ್ಯಾಯಾಧೀಶ ನ ನ್ಯಾಯಾಲಯವಾಗಿದ್ದರೆ ಹೇಗೋ ಹಾಗೆ ಅನ್ವಯವಾಗತಕ್ಕದ್ದು:

ಪರಂತು, 384 ನೇ ಪ್ರಕರಣದ ( 1) ನೇ ಉಪ-ಪ್ರಕರಣದಲ್ಲಿ ನಮೂದಿಸಿದ ಅಧಿವಿಚಾರಣಾ ನ್ಯಾಯಾಲಯದ ಯಾವುದೇ ಆದೇಶದ ವಿರುದ್ಧ ಜಿಲ್ಲಾ ನ್ಯಾಯಾಧೀಶನಿಗೆ ಅಪೀಲು ಸಲ್ಲಿಸಲು ಅವಕಾಶವಿರತಕ್ಕುದೇ ಹೊರತು ಉಚ್ಚ ನ್ಯಾಯಾಲಯಕ್ಕಲ್ಲ ಮತ್ತು ಜಿಲ್ಲಾ ನ್ಯಾಯಾಧೀಶನ ಆದೇಶದ ವಿರುದ್ಧದ ಅಪೀಲಿನ ಮೇಲೆ ಉಚ್ಚ ನ್ಯಾಯಾಲಯವು ತನ್ನ ಆದೇಶದ ಮೂಲಕ ಘೋಷಣೆ ಚ ಮಾಡಲು ಮತ್ತು ನಿರ್ದೇಶನ ನೀಡಲು ಆ ಆ ಉಪ-ಪ್ರಕರಣವು ಅಧಿಕೃತಗೊಳಿಸಿದಂತೆ, ಆ ಜಿಲ್ಲಾ ನ್ಯಾಯಾಧೀಶನು ತಾನು ಸೂಕ್ತವೆಂದು ಯೋಚಿಸಿದರೆ ಅಪೀಲಿನ ಮೇಲಿನ ತನ್ನ ಆದೇಶದ ಮೂಲಕ ಯಾವುದೇ ಅಂಥ ಘೋಷಣೆಯನ್ನು ಮಾಡಬಹುದು ಮತ್ತು ನಿರ್ದೇಶನವನ್ನು ನೀಡಬಹುದು.

(3) ಕೊನೆಯ ಹಿಂದಿನ ಉಪ-ಪ್ರಕರಣದ ಮೇರೆಗೆ ಅಧಿವಿಚಾರಣಾ ನ್ಯಾಯಾಲಯದ ಆದೇಶದ ವಿರುದ್ಧದ ಅಪೀಲಿನಲ್ಲಿ ಜಿಲ್ಲಾ ನ್ಯಾಯಾಧೀಶನ ಆದೇಶವು ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908 ರ 5) ರ 141 ನೇ ಪ್ರಕರಣದ ಮೂಲಕ ಅನ್ವಯಿಸಲಾದಂತೆ ಆ ಸಂಹಿತೆಯು ಉಚ್ಚ ನ್ಯಾಯಾಲಯದಲ್ಲಿ ಅಭಿಪ್ರಾಯ ಕೋರಿಕೆಗೆ ಮತ್ತು ಪುನರೀಕ್ಷಣೆಗೆ ಮತ್ತು ತೀರ್ಪಿನ ಪುನರಾವಲೋಕನಕ್ಕೆ ಸಂಬಂಧಿಸಿದ ಉಪಬಂಧಗಳಿಗೆ ಒಳಪಟ್ಟು ಅಂತಿಮವಾಗಿರತಕ್ಕದ್ದು.

(4) ಜಿಲ್ಲಾ ನ್ಯಾಯಾಧೀಶನು ಈ ಭಾಗದ ಮೇರೆಗಿನ ಯಾವುದೇ ವ್ಯವಹರಣೆಗಳನ್ನು ಅಧಿವಿಚಾರಣಾ ನ್ಯಾಯಾಲಯದಿಂದ ಹಿಂದಕ್ಕೆ ತೆಗೆದುಕೊಳ್ಳಬಹುದು ಮತ್ತು ಅವುಗಳನ್ನು ತಾನೇ 122 ವಿಲೆ ಮಾಡಬಹುದು ಅಥವಾ ಆ ಜಿಲ್ಲಾ ನ್ಯಾಯಾಧೀಶನ ಅಧಿಕಾರ ವ್ಯಾಪ್ತಿಯ ಸ್ಥಳೀಯ ಪರಿಮಿತಿಗಳಲ್ಲಿ ಸ್ಥಾಪಿಸಲಾದ ಮತ್ತು ಆ ವ್ಯವಹರಣೆಗಳನ್ನು ವಿಲೆ ಮಾಡಲು ಅಧಿಕಾರವನ್ನು ಹೊಂದಿರುವ ಇನ್ನೊಂದು ಅಂಥ ನ್ಯಾಯಾಲಯಕ್ಕೆ ವರ್ಗಾವಣೆ ಮಾಡಬಹುದು.

( 5) ( 1) ನೇ ಉಪ-ಪ್ರಕರಣದ ಮೇರೆಗಿನ ಅಧಿಸೂಚನೆಯು, ಯಾವುದೇ ಅಧಿವಿಚಾರಣಾ ನ್ಯಾಯಾಲಯವನ್ನು ವಿಶೇಷವಾಗಿ, ಅಥವಾ ಯಾವುದೇ ಸ್ಥಳೀಯ ಪ್ರದೇಶದಲ್ಲಿನ ಅಂಥ ನ್ಯಾಯಾಲಯಗಳ ಯಾವುದೇ ವರ್ಗವನ್ನು ನಿರ್ದಿಷ್ಟಪಡಿಸಬಹುದು.

( 6) ಯಾವುದೇ ಅಧಿನಿಯಮಿತಿಯ ಯಾವುದೇ ಉದ್ದೇಶಕ್ಕಾಗಿ ಜಿಲ್ಲಾ ನ್ಯಾಯಾಧೀಶನಿಗೆ ಅಧೀನವಾಗಿರುವ ಅಥವಾ ಅವನ ನಿಯಂತ್ರಣಕ್ಕೆ ಒಳಪಟ್ಟಿರುವಂಥ ಯಾವುದೇ ಸಿವಿಲ್ ನ್ಯಾಯಾಲಯವು ಈ ಪ್ರಕರಣದ ಉದ್ದೇಶಗಳಿಗಾಗಿ ಜಿಲ್ಲಾ ನ್ಯಾಯಾಧೀಶನ ದರ್ಜೆಗಿಂತ ಕೆಳಗಿನ ದರ್ಜೆಯ ನ್ಯಾಯಾಲಯವಾಗಿರುವುದಾಗಿ ಭಾವಿಸತಕ್ಕದ್ದು. "

11. ಉತ್ತರಾಧಿಕಾರ ಅಧಿನಿಯಮದ 299 ನೇ ಪ್ರಕರಣವು ಜಿಲ್ಲಾ ನ್ಯಾಯಾಧೀಶರುಗಳ ಆದೇಶಗಳಿಂದ ಬರುವ ಅಪೀಲುಗಳ ಬಗ್ಗೆ ವಿವರಿಸುತ್ತದೆ.ಅದನ್ನು ಈ ಕೆಳಗಿನಂತೆ ಓದಲಾಗಿದೆ:

“299. ಜಿಲ್ಲಾ ನ್ಯಾಯಾಧೀಶನ ಆದೇಶಗಳ ವಿರುದ್ಧ ಅಪೀಲುಗಳು.- ಈ ಮೂಲಕ ಜಿಲ್ಲಾ ನ್ಯಾಯಾಧೀಶನಿಗೆ ಪ್ರದತ್ತವಾದ ಅಧಿಕಾರಗಳಿಂದಾಗಿ ಅವನು ಮಾಡಿದ ಪ್ರತಿಯೊಂದು ಆದೇಶವು ಅಪೀಲುಗಳಿಗೆ ಅನ್ವಯವಾಗಬಹುದಾದ ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908 ರ 5) ಉಪಬ ೦ ಧಗಳಿಗೆ ಅನುಸಾರವಾಗಿ ಉಚ್ಚ ನ್ಯಾಯಾಲಯಕ್ಕೆ ಮಾಡಿಕೊಳ್ಳಲು ಒಳಪಟ್ಟಿರತಕ್ಕದ್ದು.

12. ಕರ್ನಾಟಕ ಸಿವಿಲ್ ನ್ಯಾಯಾಲಯಗಳ ಅಧಿನಿಯಮ, 1964 ರ 23 ಎ. ಪ್ರಕರಣವನ್ನು ಈ ಕೆಳಗಿನಂತೆ ಓದಲಾಗಿದೆ:

" 23 ಎ. ಭಾರತ ಉತ್ತರಾಧಿಕಾರ ಅಧಿನಿಯಮ, 1925 ರ ಮೇರೆಗೆ ಜಿಲ್ಲಾ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯನ್ನು ಅಧೀನ ನ್ಯಾಯಾಲಯಗಳಲ್ಲಿ ನಿಹಿತಗೊಳಿಸುವುದು.- ( 1) ಉಚ್ಚ ಚ ನ್ಯಾಯಾಲಯವು ಅಧಿಸೂಚನೆಯ ಮೂಲಕ, ಅ ೦ ಥ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಸ್ಥಳೀಯ ಪರಿಮಿತಿಗಳೊಳಗೆ ಮತ್ತು ಅಂಥ ಆರ್ಥಿಕ ಮತ್ತು ಇತರ ಪರಿಮಿತಿಗಳಿಗೊಳಪಟ್ಟು ಯಾವನೇ ಹಿರಿಯ ಸಿವಿಲ್ ನ್ಯಾಯಾಧೀಶ ಅಥವಾ ಸಿವಿಲ್ ನ್ಯಾಯಾಧೀಶನಲ್ಲಿ ಭಾರತ ಉತ್ತರಾಧಿಕಾರ ಅಧಿನಿಯಮ, (ಕೇಂದ್ರ ಅಧಿನಿಯಮ, 1925 ರ 39) 1925 ರ ಮೇರೆಗೆ ಜಿಲ್ಲಾ ನ್ಯಾಯಾಧೀಶನ ಎಲ್ಲ ಅಥವಾ ಯಾವುದೇ ಅಧಿಕಾರವನ್ನು ನಿಹಿತಗೊಳಿಸಬಹುದು.

(2) (1) ನೇ ಉಪಪ್ರಕರಣದ ಮೇರೆಗೆ ಅಧಿಕಾರಗಳನ್ನು ನಿಹಿತಗೊಳಿಸಿದ ಯಾವನೇ ಹಿರಿಯ ಸಿವಿಲ್ ನ್ಯಾಯಾಧೀಶನು ಅಥವಾ ಸಿವಿಲ್ ನ್ಯಾಯಾಧೀಶನು, ಜಿಲ್ಲಾ ನ್ಯಾಯಾಧೀಶನಿಗೆ ಸದರಿ ಅಧಿನಿಯಮದ ಮೂಲಕ ಪ್ರದವಾದ ಅಧಿಕಾರಗಳನ್ನು ಚಲಾಯಿಸುವಲ್ಲಿ ಜಿಲ್ಲಾ ನ್ಯಾಯಾಧೀಶನೊಂದಿಗೆ ಸಮವರ್ತಿ

ಅಧಿಕಾರ ವ್ಯಾಪ್ತಿಯನ್ನು ಹೊಂದಿರತಕ್ಕದ್ದು ಮತ್ತು ಜಿಲ್ಲಾ ನ್ಯಾಯಾಧೀಶನಿಗೆ ಸ ಂ ಬ ಂ ಧಪಟ್ಟ ಸದರಿ ಅಧಿನಿಯಮದ ಉಪಬಂಧಗಳು, ಎ ಸಂದರ್ಭಾನುಸಾರ ಅಂಥ ಹಿರಿಯ ಸಿವಿಲ್ ನ್ಯಾಯಾಧೀಶ ಅಥವಾ ಸಿವಿಲ್ ನ್ಯಾಯಾಧೀಶನಿಗೆ, ಅವನು ಜಿಲ್ಲಾ ನ್ಯಾಯಾಧೀಶನಾಗಿದ್ದಿದ್ದರೆ ಹೇಗೋ ಹಾಗೆ ಅನ್ವಯವಾಗತಕ್ಕದ್ದು:

124 ಪರಂತು, ( 1) ನೇ ಉಪಪ್ರಕರಣದ ಮೇರೆಗೆ ಅವನಿಗೆ ಪ್ರದತ್ತವಾದ ಅಧಿಕಾರಗಳಿಂದಾಗಿ, ಹಿರಿಯ ಸಿವಿಲ್ ನ್ಯಾಯಾಧೀಶ ಅಥವಾ ಸಿವಿಲ್ ನ್ಯಾಯಾಧೀಶನು ಮಾಡಿದ ಪ್ರತಿಯೊಂದು ಆದೇಶವು,

( i) ಸಿವಿಲ್ ನ್ಯಾಯಾಧೀಶನು ಆದೇಶವನ್ನು ಮಾಡಿದಾಗ ಹಿರಿಯ ಸಿವಿಲ್ ನ್ಯಾಯಾಧೀಶನ ನ್ಯಾಯಾಲಯಕ್ಕೆ;

(ii) ಹಿರಿಯ ಸಿವಿಲ್ ನ್ಯಾಯಾಧೀಶನು ಮಾಡಿದ ಆದೇಶದ ಸಂದರ್ಭದಲ್ಲಿ ಜಿಲ್ಲಾ ನ್ಯಾಯಾಲಯಕ್ಕೆ ಅಪೀಲಿಗೆ ಒಳಪಟ್ಟಿರತಕ್ಕದ್ದು.

(3) ( 2) ನೇ ಉಪಪ್ರಕರಣದ ಪರಂತುಕದ ಮೇರೆಗೆ ಅಪೀಲಿನಲ್ಲಿ ಮಾಡಿದ ಪ್ರತಿಯೊಂದು ಆದೇಶವು, ಅಪೀಲು, ಡಿಗ್ರಿಗಳಿಂದ ಅಪೀಲುಗಳಿಗೆ ಅನ್ವಯವಾಗಬಹುದಾದ ಸಿವಿಲ್ ಪ್ರಕ್ರಿಯಾ ಸಂಹಿತೆ, 1908 ರಲ್ಲಿ ಅಡಕಗೊಂಡ ನಿಯಮಗಳ ಮೇರೆಗೆ ಉಚ್ಚ ನ್ಯಾಯಾಲಯಕ್ಕೆ ಚ ಅಪೀಲಿಗೆ ಒಳಪಟ್ಟಿರತಕ್ಕದ್ದು."

ಹೀಗಾಗಿ, ಜಿಲ್ಲಾ ನ್ಯಾಯಾಲಯವು ಪ್ರೊಬೇಟ್ ವಿಷಯಗಳನ್ನು ಚರ್ಚಿಸಿ ವ್ಯಾಖ್ಯಾನಿಸುವ ನ್ಯಾಯವ್ಯಾಪ್ತಿಯನ್ನು ಹೊಂದಿದೆ ಎಂಬುದನ್ನು ಮೇಲೆ ಹೇಳಲಾದ ಉಪಬಂಧಗಳ ಓದುವಿಕೆಯಿಂದ ಸ್ಪಷ್ಟವಾಗುತ್ತದೆ.ಆದಾಗ್ಯೂ, ಉಚ್ಚ ನ್ಯಾಯಾಲಯವು ಅಧಿಸೂಚನೆಯ ಮೂಲಕ, ಭಾರತ ಉತ್ತರಾಧಿಕಾರ ಅಧಿನಿಯಮದ ಅಡಿಯಲ್ಲಿ ಜಿಲ್ಲಾ ನ್ಯಾಯಾಧೀಶರ ಎಲ್ಲಾ ಅಥವಾ ಯಾವುದೇ ಅಧಿಕಾರಗಳೊಂದಿಗೆ ಯಾರೇ ಹಿರಿಯ ಸಿವಿಲ್ ನ್ಯಾಯಾಧೀಶರು ಅಥವಾ ಸಿವಿಲ್ ನ್ಯಾಯಾಧೀಶರನ್ನು ನಿಹಿತಗೊಳಿಸಬಹುದು.ಉಚ್ಚ ನ್ಯಾಯಾಲಯವುದಿನಾಂಕ: 29.03.1979 ರ ಚ ರಾಜಪತ್ರದಲ್ಲಿ ಪ್ರಕಟಿಸಲಾದ ಅಧಿಸೂಚನೆಯ ಮೂಲಕ ಅಧಿಕಾರಗಳನ್ನು ಹಾಗೆ ಅಂತರ್ನಿಹಿತಗೊಳಿಸಿದೆ.ಇದನ್ನು ಬಿ.ಆರ್.ಜಯಂತಿ ಮತ್ತು ಇತರರು ವಿರುದ್ಧ ರಾಧಮ್ಮ ಮತ್ತು ಇತರರು (ಮೇಲಿನ) ಮೊಕದ್ದಮೆಯಲ್ಲಿ ಈ ನ್ಯಾಯಾಲಯವು ಪರಿಶೀಲಿಸಿದೆ.ಸದರಿ ತೀರ್ಪಿನ 11 ನೇ ಮತ್ತು 15 ನೇ ಕಂಡಿಕೆಗಳನ್ನು ಈ ಕೆಳಗಿನಂತೆ ಓದಲಾಗಿದೆ:

"11. ಸಿವಿಲ್ ನ್ಯಾಯಾಲಯಗಳ ಅಧಿನಿಯಮದಲ್ಲಿ ಹೊಸದಾಗಿ ಸೇರ್ಪಡೆ ಮಾಡಲಾದ 23- ಎ ಪ್ರಕರಣದ ಅಡಿಯಲ್ಲಿ ಉಚ್ಚ ನ್ಯಾಯಾಲಯಕ್ಕೆ ಪ್ರದತ್ತವಾದ ಮೇಲ್ಕಂಡ ಅಧಿಕಾರಗಳಿಗೆ ಅನುಸಾರವಾಗಿ, ಉಚ್ಚ ನ್ಯಾಯಾಲಯವು ಅಧಿಸೂಚನೆಯನ್ನು ಚ ಹೊರಡಿಸಿದ್ದು, ಅದನ್ನುದಿನಾಂಕ: 29.3.1979 ರ ಗೆಜೆಟ್ನಲ್ಲಿ ಪ್ರಕಟಿಸಲಾಗಿದೆ.ಅದನ್ನು ಈ ಕೆಳಗಿನಂತೆ ಓದಲಾಗಿದೆ:

"ಸಂಖ್ಯೆ: ಜಿಒಬಿ 460/78.ಕರ್ನಾಟಕ ಸಿವಿಲ್ ನ್ಯಾಯಾಲಯಗಳ ಅಧಿನಿಯಮ, 1964 ರ (1978 ರ ಕರ್ನಾಟಕ ಅಧಿನಿಯಮ 28) 23- ಎ ಪ್ರಕರಣದ ( 1) ನೇ ಉಪ-ಪ್ರಕರಣದ ಅಡಿಯಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಉಚ್ಚ ನ್ಯಾಯಾಲಯವು ಈ ಮೂಲಕ ರಾಜ್ಯದಲ್ಲಿನ ಸಿವಿಲ್ ನ್ಯಾಯಾಧೀಶರು ಮತ್ತು ಮುನ್ಸಿಫ್ಗಳ ನ್ಯಾಯಾಲಯಗಳ ಅಧ್ಯಕ್ಷತೆ ವಹಿಸುವ ಎಲ್ಲ ಅಧಿಕಾರಗಳನ್ನು, ಜಿಲ್ಲಾ ನ್ಯಾಯಾಧೀಶರ ಎಲ್ಲಾ ಅಥವಾ ಯಾವುದೇ ಅಧಿಕಾರಗಳೊಂದಿಗೆ ಭಾರತ ಉತ್ತರಾಧಿಕಾರ ಅಧಿನಿಯಮ, 1925 ರ 388 ನೇ ಪ್ರಕರಣದ

ಅಡಿಯಲ್ಲಿ, ಅವುಗಳ ಆಯಾ ಪ್ರಾದೇಶಿಕ ಅಧಿಕಾರ ವ್ಯಾಪ್ತಿ ಮತ್ತು ಆಯಾ ಮೌಲ್ಯಾಧಾರಿತ ಅಧಿಕಾರ ವ್ಯಾಪ್ತಿಗಳ ಪರಿಮಿತಿಗಳೊಳಗೆ ಈ ಮೂಲಕ ನಿಹಿತಗೊಳಿಸುತ್ತದೆ.೨೨

15. ಹೀಗಾಗಿ, ಕರ್ನಾಟಕ ಸಿವಿಲ್ ನ್ಯಾಯಾಲಯಗಳ ಅಧಿನಿಯಮ, 1964 ರ 23- ಎ ಪ್ರಕರಣದ ಅಡಿಯಲ್ಲಿ ಚಲಾಯಿಸಲಾದ ಅಧಿಕಾರಗಳ ಕಾರಣದಿಂದಾಗಿ ಅಧಿಸೂಚನೆಯನ್ನು ಹೊರಡಿಸಲಾಗಿದೆ ಮತ್ತು ಸದರಿ ಅಧಿಸೂಚನೆಗೆ ಅನುಸಾರವಾಗಿ ಜಿಲ್ಲಾ ನ್ಯಾಯಾಧೀಶರುದಿನಾಂಕ: 12.12.2003 ರ ಆದೇಶದ ಮೂಲಕ ಸ್ವತ್ತಿನ ಮೌಲ್ಯಾಧಾರಿತ ಮತ್ತು ಪ್ರಾದೇಶಿಕ ಅಧಿಕಾರ ವ್ಯಾಪ್ತಿಗೆ ಸಂಬಂಧಿಸಿದಂತೆ ಕಚೇರಿ ಟಿಪ್ಪಣಿಯನ್ನು ಪರಿಗಣಿಸಿದ್ದು, ಅಧಿನಿಯಮದ 276 ನೇ ಪ್ರಕರಣದ ಅಡಿಯಲ್ಲಿ ಸಲ್ಲಿಸಿದ ಅರ್ಜಿಯನ್ನು ವರ್ಗಾಯಿಸಿದ್ದಾರೆ.ಅದರ ಅಧಿವಿಚಾರಣೆಗಾಗಿ ಅದನ್ನು ದಾವೆಯನ್ನಾಗಿ ಪರಿವರ್ತಿಸಲಾಯಿತು ಮತ್ತು ಮಡಿಕೇರಿಯ ಸಿವಿಲ್ ನ್ಯಾಯಾಧೀಶರು (ಕಿರಿಯ ವಿಭಾಗ) ಅದನ್ನು ವಿಲೇ ಮಾಡಿದರು.

13. ಹೀಗಾಗಿ, ಸದ್ಯದ ಮೊಕದ್ದಮೆಯಲ್ಲಿ, ಸಿವಿಲ್ ನ್ಯಾಯಾಧೀಶರು (ಕಿರಿಯ ವಿಭಾಗ) ಮೊದಲ ನಿದರ್ಶನದಲ್ಲಿ, ಇದರಲ್ಲಿನ ಅರ್ಜಿದಾರರು ಸಲ್ಲಿಸಿದ ಪಿ ಮತ್ತು ಎಸ್ಸಿಸಂಖ್ಯೆ: 25/2008 ನ್ನು ಸ್ವೀಕರಿಸುವ ಅಧಿಕಾರವನ್ನು ಹೊಂದಿದ್ದರು.ಇದು ಎರಡೂ ಪಕ್ಷಕಾರರಿಂದ ವಿವಾದಕ್ಕೊಳಗಾಗಿಲ್ಲ.ಪಿ ಮತ್ತು ಎಸ್ಸಿಯನ್ನು ಇದರಲ್ಲಿನ ಅರ್ಜಿದಾರರು ಜಿಲ್ಲಾ ನ್ಯಾಯಾಧೀಶರ ಮುಂದೆ ಸಲ್ಲಿಸಿರಬೇಕಿದ್ದಲ್ಲಿ, ಮತ್ತು ಸದರಿ ಜಿಲ್ಲಾ ನ್ಯಾಯಾಧೀಶರು ಅದನ್ನು ತೀರ್ಮಾನಿಸಿರಬೇಕಿದ್ದಲ್ಲಿ ಆಗ, ವಿವಾದಿತ ವಿಷಯದಲ್ಲಿ, ಇದರಲ್ಲಿನ ಅರ್ಜಿದಾರರ ವಾದದ ಪ್ರಕಾರ ಬಾಧಿತ ಪಕ್ಷಕಾರರು ಈ ನ್ಯಾಯಾಲಯದ ಮುಂದೆ ನಿಯತ ಮೊದಲನೇ ಅಪೀಲನ್ನು ಸಲ್ಲಿಸಬೇಕಿತ್ತು ಅಥವಾ ವಾದವು ವಿರೋಧಾತ್ಮಕವಾಗಿರದಿದ್ದರೆ, ಆ ಸಂದರ್ಭದಲ್ಲಿ, ಸಂಕೀರ್ಣ ಮೊದಲ ಅಪೀಲನ್ನು ಸಲ್ಲಿಸಿರಬೇಕಿತ್ತು.ಆದಾಗ್ಯೂ, ಸದ್ಯದ ಮೊಕದ್ದಮೆಯಲ್ಲಿ ಅದನ್ನು ಸಿವಿಲ್ ನ್ಯಾಯಾಧೀಶರ (ಕಿರಿಯ ವಿಭಾಗ) ಮುಂದೆ ಮಂಡಿಸಲಾಗಿದೆ ಮತ್ತು ಕರ್ನಾಟಕ ಸಿವಿಲ್ ನ್ಯಾಯಾಲಯಗಳ ಅಧಿನಿಯಮ, 1964 ರ 23- ಎ ಪ್ರಕರಣದ ಪ್ರಕಾರ, ಹಿರಿಯ ಸಿವಿಲ್ ನ್ಯಾಯಾಧೀಶರಿಗೆ ಅಪೀಲು ಸಲ್ಲಿಸತಕ್ಕದ್ದು.

14. " ಮಿಸ್ ಪ್ರೆಸ್ಸಿ ಪಿಂಟೊ -ವಿರುದ್ಧ ರೋನಿ ಮ್ಯಾಕ್ಸಿಮ್ ಪಿಂಟೊ ಮತ್ತು ಇತರರು (ಮೇಲಿನ) ಮೊಕದ್ದಮೆಯಲ್ಲಿ ಈ ನ್ಯಾಯಾಲಯವು, ಜಿಲ್ಲಾ ನ್ಯಾಯಾಧೀಶರ ಆದೇಶಗಳಿಂದ ಸಲ್ಲಿಸಲಾದ ಅಪೀಲುಗಳ ಬಗ್ಗೆ ಮಾತ್ರ ಚರ್ಚಿಸಲಾಗಿದೆ.ಪ್ರೊಬೇಟ್ನಾಗಿ ಸಿವಿಲ್ ನ್ಯಾಯಾಧೀಶರ (ಕಿರಿಯ ವಿಭಾಗ) ಮುಂದೆ ಅರ್ಜಿಯನ್ನು ಸಲ್ಲಿಸಲಾಗಿದ್ದ ಸನ್ನಿವೇಶದ ಬಗ್ಗೆ ಅದು ಚರ್ಚಿಸಿಲ್ಲ ಮತ್ತು ತದನುಸಾರವಾಗಿ, ಉಚ್ಚ ನ್ಯಾಯಾಲಯಕ್ಕೆ ಅಪೀಲು ಸಲ್ಲಿಸಲಾಗಿದೆ ಎಂದು ಅಭಿಪ್ರಾಯಪಟ್ಟಿದೆ.ಚ ಶ್ರೀ ರಾಮಚಂದ್ರ ವಿರುದ್ಧ ನಿಂಗಪ್ಪ ದತ್ತಾತ್ರೇಯ ಕೋಲ್ಕರ್ ಮತ್ತು ಇತರರು (ಮೇಲಿನ) ಮೊಕದ್ದಮೆಯಲ್ಲಿ ಈ ನ್ಯಾಯಾಲಯವು " ಮಿಸ್ ಪ್ರೆಸ್ಟಿ ಪಿಂಟೊ ಮೊಕದ್ದಮೆಯಲ್ಲಿ ತಿಳಿಸಲಾದ ಕಾನೂನನ್ನು, ಸುಬಲ್ ಪೌಲ್ ವಿರುದ್ಧ ಮನೋ ಪೌಲ್ (ಮೇಅನ) ಮೊಕದ್ದಮೆಯಲ್ಲಿ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯದ ಚ ತೀರ್ಪಿನ ಹಿನ್ನೆಲೆಯಲ್ಲಿ ಮರುಪರಿಶೀಲಿಸುವ ಅಗತ್ಯವಿದೆಯೇ?ಎಂಬುದನ್ನು ಮಾತ್ರ ಪರಿಶೀಲಿಸಿದೆ ಮತ್ತು ಅವುಗಳ ನಡುವೆ ಯಾವುದೇ ಸಂಘರ್ಷವಿಲ್ಲ ಮತ್ತು ಮಿಸ್ ಪ್ರೆಸ್ಟಿ ಪಿಂಟೊ ಮೊಕದ್ದಮೆಯಲ್ಲಿ ನಿಗದಿಗೊಳಿಸಲಾದ ಕಾನೂನನ್ನು ಮರುಪರಿಶೀಲಿಸುವ ಅಗತ್ಯವಿಲ್ಲ ಎಂದು ಉತ್ತರಿಸಿದೆ.ಮೊದಲ ನಿದರ್ಶನದಲ್ಲಿ, ಪ್ರೊಬೇಟ್ನಾಗಿ ಅರ್ಜಿಯನ್ನು ಸಿವಿಲ್ ನ್ಯಾಯಾಧೀಶರ (ಕಿರಿಯ ವಿಭಾಗ) ಮುಂದೆ ಸಲ್ಲಿಸಿದ್ದರೆ, ಅಪೀಲು ಸಲ್ಲಿಸುವ ಪರಿಸ್ಥಿತಿಯ ಬಗ್ಗೆಯೂ

ಅದು ಏನನ್ನೂ ಹೇಳಿರುವುದಿಲ್ಲ.ಹೀಗಾಗಿ, ಮೇಲ್ಕಂಡ ಪ್ರಕರಣಗಳಲ್ಲಿನ ತೀರ್ಪುಗಳು ಇದರಲ್ಲಿನ ಅರ್ಜಿದಾರರ ವ್ಯಾಜ್ಯಕ್ಕೆ ಸಹಾಯಕವಾಗಿಲ್ಲ.

15. ಅಷ್ಟೇ ಅಲ್ಲದೆ, ಎಂ.ಎ.ಸಂಖ್ಯೆ:20/2009 ರಲ್ಲಿ ಹೊರಡಿಸಲಾದ ಆದೇಶವನ್ನು ರದ್ದುಪಡಿಸಲಾಗಿಲ್ಲ ಮತ್ತು ಅದಕ್ಕೆ ಪಕ್ಷಕಾರರು ಬದ್ಧರಾಗಿದ್ದಾರೆ ಎಂದು ಇದರಲ್ಲಿನ ಅರ್ಜಿದಾರರು ವಾದಿಸಿದ್ದಾರೆ.ಇದರಲ್ಲಿನ ಎದುರುದಾರರು ಎಂ.ಎ.ಸಂಖ್ಯೆ:20/2009 ರಲ್ಲಿನ ಪಿ ಮತ್ತು ಎಸ್ಸಂಖ್ಯೆ: 25/2008 ರಲ್ಲಿ ಹೊರಡಿಸಿದ ಆದೇಶವನ್ನು ಪ್ರಶ್ನಿಸಿದ್ದಾರೆ.ಈ ಅಪೀಲನ್ನು ' ಸಿಪಿಸಿ'ಯ ಕ್ರಮಾದೇಶ XLIII ನಿಯಮ 1 ರ ಅಡಿಯಲ್ಲಿ ಸಲ್ಲಿಸಲಾಯಿತು.` ಸಿಪಿಸಿ'ಯ ಕ್ರಮಾದೇಶ XLIII ನಿಯಮ 1 ನ್ನು ಈ ಕೆಳಗಿನಂತೆ ಓದಲಾಗಿದೆ:

1. ಆದೇಶಗಳ ಮೇಲೆ ಮೇಲ್ಮನವಿಗಳು.-104 ನೇ ಪ್ರಕರಣದ ಉಪಬಂಧಗಳ ಮೇರೆಗೆ ಕೆಳಕಂಡ ಆದೇಶಗಳ ಮೇಲೆ ಮೇಲ್ಮನವಿಗೆ ಅವಕಾಶವಿರತಕ್ಕದ್ದು, ಎಂದರೆ:

(ಎ) VII ನೇ ಆದೇಶದ 10 ನೇ ನಿಯಮದಲ್ಲಿ ನಿರ್ದಿಷ್ಟಪಡಿಸಲಾದ ಪ್ರಕ್ರಿಯೆಯನ್ನು ಅನುಸರಿಸಿರುವಲ್ಲಿ ಹೊರತು, ಯುಕ್ತ ನ್ಯಾಯಾಲಯದ ಮುಂದೆ ಹಾಜರುಪಡಿಸುವುದಕ್ಕಾಗಿ ವಾದಪತ್ರವನ್ನು ಹಿಂದಿರುಗಿಸುವ VII ನೇ ಆದೇಶದ 10 ನೇ ನಿಯಮದ ಮೇರೆಗಿನ ಆದೇಶ;

(ಸಿ) ದಾವೆಯ ವಜಾವಣೆಯನ್ನು ತಳ್ಳಿಹಾಕುವ ಆದೇಶಕ್ಕಾಗಿ ಸಲ್ಲಿಸಿದ (ಮೇಲ್ಮನವಿಗೆ ಅವಕಾಶವಿರುವ ಮೊಕದ್ದಮೆಯಲ್ಲಿ) ಅರ್ಜಿಯನ್ನು ತಿರಸ್ಕರಿಸುವ IX ನೇ ಆದೇಶದ 9 ನೇ ನಿಯಮದ ಮೇರೆಗಿನ ಆದೇಶ:

(ಡಿ) ಏಕಪಕ್ಷೀಯವಾಗಿ ಮಾಡಲಾದ ಡಿಕ್ರಿಯನ್ನು ತಳ್ಳಿಹಾಕುವ ಆದೇಶಕ್ಕಾಗಿ ಸಲ್ಲಿಸಿದ (ಮೇಲ್ಮನವಿಗೆ ಅವಕಾಶವಿರುವ ಮೊಕದ್ದಮೆಯಲ್ಲಿ) ಅರ್ಜಿಯನ್ನು ತಿರಸ್ಕರಿಸುವ IX ನೇ ಆದೇಶದ 13 ನೇ ನಿಯಮದ ಮೇರೆಗಿನ ಆದೇಶ;

(ಎಫ್) IX ನೇ ಆದೇಶದ 21 ನೇ ನಿಯಮದ ಮೇರೆಗಿನ ಆದೇಶ;

(ಐ) ದಸ್ತಾವೇಜಿನ ಅಥವಾ ಹಿಂಬರಹದ ಕರಡಿನ ಬಗ್ಗೆ ಮಾಡಿದ ಆಕ್ಷೇಪಣೆಯ ಮೇಲೆ ಮಾಡಿದ XXI ನೇ ಆದೇಶದ 34 ನೇ ನಿಯಮದ ಮೇರೆಗಿನ ಆದೇಶ;

(ಜೆ) ಮಾರಾಟವನ್ನು ತಳ್ಳಿಹಾಕುವ ಅಥವಾ ತಳ್ಳಿಹಾಕಲು ನಿರಾಕರಣೆ ಮಾಡುವ XXI ನೇ ಆದೇಶದ 72 ನೇ ಅಥವಾ 92 ನೇ ನಿಯಮದ ಮೇರೆಗಿನ ಆದೇಶ;

(ಜೆಎ) XXI ನೇ ಆದೇಶದ 106 ನೇ ನಿಯಮದ ( 1) ನೇ ಉಪ ನಿಯಮದ ಮೇರೆಗೆ ಸಲ್ಲಿಸಲಾದ ಅರ್ಜಿಯನ್ನು ತಿರಸ್ಕರಿಸಲು ಆದೇಶ, ಪರಂತು, ಅಸಲು ಅರ್ಜಿಯ ಮೇಲಿನ ಆದೇಶವು, ಎ ಂ ದರೆ, ಆದೇಶದ 105 ನೇ ನಿಯಮದ ( 1) ನೇ ಉಪನಿಯಮದಲ್ಲಿ ಉಲ್ಲೇಖಿಸಲಾದ ಅರ್ಜಿಯು ಮೇಲ್ಮನವಿಗೆ ಅರ್ಹವಾಗಿರತಕ್ಕದ್ದು.

(ಕೆ) ದಾವೆಯನ್ನು ಕೊನೆಗಾಣಿಸುವುದನ್ನು ಅಥವಾ ಅದರ ವಜಾವಣೆಯನ್ನು ತಳ್ಳಿಹಾಕಲು ನಿರಾಕರಣೆ ಮಾಡುವ XXII ನೇ ಆದೇಶದ 9 ನೇ ನಿಯಮದ ಮೇರೆಗಿನ ಆದೇಶ;

(ಎಲ್) ಅನುಮತಿಯನ್ನು ಕೊಡುವ ಅಥವಾ ಕೊಡಲು ನಿರಾಕರಣೆ ಮಾಡುವ XXII ನೇ ಆದೇಶದ 10 ನೇ ನಿಯಮದ ಮೇರೆಗಿನ ಆದೇಶ:

(ಎನ್) ದಾವೆಯ ವಜಾವಣೆಯನ್ನು ತಳ್ಳಿಹಾಕುವ ಆದೇಶಕ್ಕಾಗಿ (ಮೇಲ್ಮನವಿಗೆ ಅವಕಾಶವಿರುವ ಮೊಕದ್ದಮೆಯಲ್ಲಿ) ಸಲ್ಲಿಸಲಾದ ಅರ್ಜಿಯನ್ನು ತಿರಸ್ಕರಿಸುವ XXV ನೇ ಆದೇಶದ 2 ನೇ ನಿಯಮದ ಮೇರೆಗಿನ ಆದೇಶ;

(ಎನ್ ಎ) ನಿರ್ಧನಿಕನಂತೆ ದಾವೆಯನ್ನು ಹೂಡಲು ಅನುಮತಿಗಾಗಿ ಸಲ್ಲಿಸಲಾದ ಅರ್ಜಿಯನ್ನು ತಿರಸ್ಕರಿಸುವ XXXIII ನೇ ಆದೇಶದ 5 ನೇ ಅಥವಾ 7 ನೇ ನಿಯಮದ ಮೇರೆಗಿನ ಆದೇಶ;

(ಪಿ) XXXV ನೇ ಆದೇಶದ 3 ನೇ ನಿಯಮದ, 4 ನೇ ನಿಯಮದ ಅಥವಾ 6 ನೇ ನಿಯಮದ ಮೇರೆಗಿನ ಅಂತರ್ವಾದ ದಾವೆಗಳಲ್ಲಿ ಆದೇಶಗಳು:

(ಕ್ಯೂ) XXXVIII ನೇ ಆದೇಶದ 2 ನೇ ನಿಯಮದ, 3 ನೇ ನಿಯಮದ ಅಥವಾ 6 ನೇ ನಿಯಮದ ಮೇರೆಗಿನ ಆದೇಶ;

(ಆರ್) XXXXIX ನೇ ಆದೇಶದ 1 ನೇ ನಿಯಮದ, 2 ನೇ ನಿಯಮದ, 2 ಎ ನಿಯಮದ, 4 ನೇ ನಿಯಮದ ಅಥವಾ 10 ನೇ ನಿಯಮದ ಮೇರೆಗಿನ ಆದೇಶ:

(ಎಸ್) XL ನೇ ಆದೇಶದ 1 ನೇ ನಿಯಮದ ಅಥವಾ 4 ನೇ ನಿಯಮದ ಮೇರೆಗಿನ ಆದೇಶ;

( ಟಿ) XLI ನೇ ಆದೇಶದ 19 ನೇ ನಿಯಮದ ಮೇರೆಗೆ ಮೇಲ್ಮನವಿಯನ್ನು ಪುನಃ ಅಂಗೀಕರಿಸಲು, ಅಥವಾ XLI ನೇ ಆದೇಶದ 21 ನೇ ನಿಯಮದ ಮೇರೆಗೆ ಸುನಾವಣೆ ಮಾಡಲು ನಿರಾಕರಣೆ ಮಾಡುವ ಆದೇಶ;

(ಯು) ಮೇಲ್ಮನವಿ ನ್ಯಾಯಾಲಯದ ಡಿಕ್ರಿಯ ಮೇಲೆ ಮೇಲ್ಮನವಿ ಮಾಡಬಹುದಾಗಿರುವಲ್ಲಿ ಮೊಕದ್ದಮೆಯನ್ನು ವಾಪಸ್ಸು ಕಳುಹಿಸುವ XLI ನೇ ಆದೇಶದ 23 ನೇ ನಿಯಮದ ಅಥವಾ 23 ಎ ನಿಯಮದ ಮೇರೆಗಿನ ಆದೇಶ;

(ಡಬ್ಲ್ಯೂ) XLVII ನೇ ಆದೇಶದ 4 ನೇ ನಿಯಮದ ಮೇರೆಗೆ ಪುನರವಲೋಕನಕ್ಕಾಗಿ ಸಲ್ಲಿಸಲಾದ ಅರ್ಜಿಯನ್ನು ಮಂಜೂರು ಮಾಡುವ ಆದೇಶ. ”

16. ' ಸಿಪಿಸಿ'ಯ ಕ್ರಮಾದೇಶ XLIII ನಿಯಮ 1 ರ ಅಡಿಯಲ್ಲಿ ಯಾವುದೇ ಅಪೀಲನ್ನು ನಿರ್ದಿಷ್ಟವಾಗಿ ಅದರಲ್ಲಿ ನಮೂದಿಸಲಾದ ಆದೇಶಗಳಿಗೆ ವಿರುದ್ಧವಾಗಿ ಮಾತ್ರ ಸಲ್ಲಿಸಬಹುದು ಮತ್ತು ಬೇರೆ ಯಾವುದೇ ಆದೇಶದಿಂದಲ್ಲ.ಹೀಗಾಗಿ, ಪಿ ಮತ್ತು ಎಸ್ಸಂಖ್ಯೆ: 25/2008 ರ ವಿರುದ್ಧದ ಅಪೀಲನ್ನು ಸಿಪಿಸಿ'ಯ ಕ್ರಮಾದೇಶ XLIII ನಿಯಮ 1 ರ ಅಡಿಯಲ್ಲಿ ಸಲ್ಲಿಸಲಾಗುವುದಿಲ್ಲ.ಅದನ್ನು ತಪ್ಪಾಗಿ ಸಲ್ಲಿಸಲಾಗಿತ್ತು.ಆದ್ದರಿಂದ ಬೆಳಗಾವಿಯ ಸಿವಿಲ್ ನ್ಯಾಯಾಧೀಶರು (ಹಿರಿಯ ವಿಭಾಗ) ಎಂ.ಎ.ಸಂಖ್ಯೆ:20/2009 ನ್ನು, ಅದು ಸಮರ್ಥನೀಯವಾಗಿಲ್ಲದ ಕಾರಣದಿಂದ ವಜಾಗೊಳಿಸಿದರು.ಸದರಿ ವಜಾವಣೆಯ ವಿರುದ್ಧ ಇದರಲ್ಲಿನ ಎದುರುದಾರರು ರಿಟ್ ಅರ್ಜಿಸಂಖ್ಯೆ: 63619/2010 ನ್ನು ಸಲ್ಲಿಸಿದರು.ಸದರಿ ರಿಟ್ ಅರ್ಜಿಯನ್ನು ಅಪೀಲು ಸಲ್ಲಿಸುವ ಸ್ವಾತಂತ್ರ್ಯದೊಂದಿಗೆ ಹಿಂಪಡೆಯಲು ಕೋರಲಾಯಿತು.ಮೇಲೆ ಹೇಳಲಾದ ರಿಟ್ ಅರ್ಜಿಯನ್ನು ವಿಲೇ ಮಾಡುವಾಗ ಮಾನ್ಯ ಏಕ ನ್ಯಾಯಾಧೀಶರು, ಈ ಕೆಳಗಿನಂತೆ ಅಭಿಪ್ರಾಯಪಟ್ಟಿದ್ದಾರೆ:

66 “ ಈ ಮೇಲಿನ ಅಂಶಗಳ ದೃಷ್ಟಿಯಿಂದ, ಶ್ರೀ ಎಸ್.ಎಸ್. ಕಟಗೇರಿಯವರು ರಿಟ್ ಅರ್ಜಿಯನ್ನು ಹಿಂಪಡೆಯಲು ಮತ್ತು ಅಪೀಲು ಹೂಡಲು ಅನುಮತಿ ಕೋರಿದ್ದಾರೆ.ಮಾನ್ಯ ವಕೀಲರ ನಿವೇದನೆಯನ್ನು

ದಾಖಲಿಸಲಾಗಿದೆ ಮತ್ತು ಎರಡೂ ಪಕ್ಷಕಾರರ ಎಲ್ಲಾ ವಾದಗಳಿಗೆ ಅವಕಾಶ ನೀಡಿ, ಅದಕ್ಕೆ ಅನುಸಾರವಾಗಿ ಈ ಅರ್ಜಿಯನ್ನು ವಿಲೇ ಮಾಡಲಾಗಿದೆ. ಅಪೀಲನ್ನು ನಾಲ್ಕು ವಾರಗಳ ಅವಧಿಯೊಳಗೆ ಸಲ್ಲಿಸಿದಲ್ಲಿ, ಈ ರಿಟ್ ಅರ್ಜಿಯನ್ನು ವಿಚಾರಣೆಗೆ ಒಳಪಡಿಸುವಲ್ಲಿ ಕಳೆದ ಸಮಯವನ್ನು ಬಿಟ್ಟುಬಿಡತಕ್ಕದ್ದು.

17. ಆದ್ದರಿಂದ, ಇದರಲ್ಲಿನ ಎದುರುದಾರರಿಗೆ ಸೂಕ್ತವಾದ ಅಪೀಲನ್ನು ಸಲ್ಲಿಸುವ ಸ್ವಾತಂತ್ರ್ಯವನ್ನು ನೀಡಲಾಗಿದೆ ಮತ್ತು ಅದರ ಪ್ರಕಾರ, ಇದರಲ್ಲಿನ ಎದುರುದಾರರು ಎಂ.ಎ.ಸಂಖ್ಯೆ: 91/2013 ನ್ನು ಬೆಳಗಾವಿಯ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿಜೆಎಂ ರವರ ಮುಂದೆ ಸಲ್ಲಿಸಿದ್ದಾರೆ, ಹೀಗಾಗಿ ಎಂ.ಎ.ಸಂಖ್ಯೆ:20/2009 ರಲ್ಲಿ ವಿವಾದವು ಈಗಾಗಲೇ ಅಂತಿಮವಾಗಿ ಬಗೆಹರಿದಿದೆ ಎಂದು ಹೇಳಲಾಗುವುದಿಲ್ಲ ಹಾಗೂ ಈಗಿನ ಎಂ.ಎ.ಸಂಖ್ಯೆ:91/2013 ಸಮರ್ಥನೀಯವಾಗಿಲ್ಲ.

18. ಈ ಮೇಲೆ ಹೇಳಲಾದ ಕಾರಣಗಳಿಗಾಗಿ, ಸಿವಿಲ್ ಪುನರೀಕ್ಷಣಾ ಅರ್ಜಿಯನ್ನು ಈ ಮೂಲಕ ವಜಾಗೊಳಿಸಲಾಗಿದೆ.ವೆಚ್ಚಗಳಿಗೆ ಸಂಬಂಧಿಸಿದಂತೆ ಯಾವುದೇ ಆದೇಶವಿಲ್ಲ.